**TADIPATRI GURUKULA**

ಜಯವದೆ ಜಯವದೆ

ಜಯವದೆ ಜಯವದೆ

ಜಯವದೆ ಜಯವದೆ ಈ ಮನೆತನಕೆ
ಭಯವಿಲ್ಲ ಎಂದೆಂದಿಗು ನಿಜವು
ಬಿಡು ಬಿಡು ಬಿಡು ಬಿಡು ಮನ ಸಂಶಯವ

ಶುಕನೆಂಬ ಹಕ್ಕಿ ಹೆಳುತದಪ್ಪ |
ಜಗವೆಂಬಾ ಗಿಡ ಹುಟ್ಟೈತಣ್ಣ
ಹಕ್ಕಿಗಳೆರಡು ಕೂಡ್ಯೆದಾವೆ |
ಹಣ್ಣುಗಳೆರಡು ಐದಾವಪ್ಪ |

ಮೂರು ಮೂರು ಗುಣ ಕೇಳಣ್ಣ |
ಹಣ್ಣಿಣೊಳಗೆ ನಾಲ್ಕು ರಸವಪ್ಪ |
ಐದು ದೊಡ್ಡ ಹರೆ ಕಾಣ್ಣಪ್ಪ |
ಆರು ಬಗೆಯ ಸ್ವರೂಪ ಕೇಳು |

ಏಳು ಬಗೆಯ ತೊಗಟುಣಣ್ಣ |
ಸಣ್ಣ ಗರಿಗಳೂ ಎಣ್ಟೈದಾವೆ |
ಅಕ್ಷವು ಅದಕೆ ಒಂಬತ್ತೈತೆ |
ಎಲೆಗಳು ಹತ್ತು ಐದಾವಪ್ಪ |

ಒಂದೇ ಹಕ್ಕಿ ಹಣ್ತಿಂತ್ತೈತೆ |

ಮತ್ತೊಂದ್ ಹಕ್ಕಿ ನೋಡುತದಪ್ಪ |
ಹಣ್ ತಿಂದ್ ಹಕ್ಕಿ ಬಡವಾಗ್ಯೆತೆ |
ತಿನ್ನದ ಹಕ್ಕಿ ಬಳಿತ್ಯೆತಣ್ಣ

ಒಂದೇ ಕುಲವೆಂದ್ ತಿಳಿಯಲು ಬೇಡ |
ತಿಳಿದರೆ ನಿಮಗೆ ಕೇಡಾದೀತು |
ದಾಸತತ್ತ್ವದ ಆದಿ ಕಾಣಣ್ಣ |
ಹಳೇ ವಸ್ತ್ರವ ಬಿಸಾಡಣ್ಣ |
ಹೊಸ ವಸ್ತ್ರ ನಿಮಗೆ ದೇವರು ಕೊಟ್ಟಾನು |

ಹಕ್ಕಿಯ ಅರಸ ಹೇಳಿದ ಮಾತು |
ಉತ್ತಮ ಮಾರ್ಗವ ಹಿಡಿಯೊ ತಮ್ಮ |
ಮಾರ್ಗವ ಕಟ್ಟಿ ಸುಲಿಯುತ್ತಾರೆ |
ಮಾರನೆಂಬುವ ಕಳ್ಳೈದಾನೆ |
ಪುರಂದರನಾದರೆ ಬಿಡುವವನಲ್ಲ |

ಗುರುವಿನ ಸಂಗತಿ ಹಿಡಿಯೊ ಅಣ್ಣ
ಕಿವಿಯೂ ಮೂಗು ನಾಲಿಗೆಯಪ್ಪ |
ಒಂದೊಂದು ನಿನ್ನ ಕೊಂದಾವಣ್ಣ |

ಕುರಂಗ ಮಾತಂಗ ಪತಂಗ ಕೇಳು |
ಬೃಂಘ ಮೀನವು ಹತವಾಯಿತಣ್ಣ
ಜ್ಞಾನ ಭಕ್ತಿಗಳೆಂಬ ಎರಡು |
ಮಾರ್ಗಗಳು ಬರುವ ತನಕ ಎರಡೂ ಮನೆಯೊಳಗಿರಬೇಕಣ್ಣ |

ದಾನದ ಕೈಯ್ಯ ತೋರಿಸಬೇಕು |

ಅದರಿಂದ ನದಿಯ ದಾಟುತಿಯಪ್ಪ |
ನಿನ್ ಯೋಗ್ಯತೆ ತಿಳಿದ ಮೇಲೆ
ಪುರಂದರ ವಿಠ್ಠಲ ಸ್ಥಳ ಕೊಟ್ಟಾನು |